ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

ದಿನಾಂಕ : 12 MAY 2022

ಕವಿಪ್ರನಿನಿ/ಬಿ9/32948/22-23

## ಅಧಿಕೃತ ಜ್ಞಾಪನ

**ವಿಷಯ:-** 2021-22 ನೇ ಸಾಲಿನ ರಾಜ್ಯವ್ಯಾಪ್ತಿ ಏಕರೂಪ ಅನುಸೂಚಿತ ದರಪಟ್ಟಿಗಳನ್ನು ಕವಿಪ್ರನಿನಿಯ ಕಾಮಗಾರಿಗಳಲ್ಲಿ ಅಳವಡಿಸಿಕೊಳ್ಳುವ ಬಗ್ಗೆ.

**ಉಲ್ಲೇಖ:-**
1. ಕವಿಪ್ರನಿನಿ ಅಧಿಕೃತ ಜ್ಞಾಪನ ಸಂಖ್ಯೆ ಬಿ9/38304/13-14 ದಿನಾಂಕ 02/11/2019.
2. ಸರ್ಕಾರದ ಆದೇಶ ಸಂಖ್ಯೆ ಲೋ.ಇ 51 ಆರ್‌ಡಿಎಫ್ 2019 ದಿನಾಂಕ 18/03/2022.
3. ಸರ್ಕಾರದ ಆದೇಶ ಸಂಖ್ಯೆ ಲೋ.ಇ 51 ಆರ್‌ಡಿಎಫ್ 2019 ದಿನಾಂಕ 25/03/2022.

**ಪೀಠಿಕೆ:**

1. ದಿನಾಂಕ 02/11/2019 ರ ನಿಗಮದ ಅಧಿಕೃತ ಜ್ಞಾಪನದಲ್ಲಿ 2018-19 ನೇ ಸಾಲಿನ ಲೋಕೋಪಯೋಗಿ ಇಲಾಖೆಯ ವೃತ್ತಾವಾರು ದರಪಟ್ಟಿಯನ್ನು ಕವಿಪ್ರನಿನಿಯಲ್ಲಿ ಅಳವಡಿಸಿಕೊಳ್ಳಲು ಹಾಗೂ ಸದರಿ ದರಪಟ್ಟಿಯಲ್ಲಿ ಕವಿಪ್ರನಿನಿಯ ಕಾಮಗಾರಿಗಳಿಗೆ ಅನ್ವಯವಾಗುವ ಶೇಕಡಾ 18 ರ ಜಿಎಸ್‌ಟಿ ಯನ್ನು ಸೇರಿಸಲು ಅನುಮೋದನೆ ನೀಡಲಾಗಿದೆ.
2. ದಿನಾಂಕ 18/03/2022 ರ ಸರ್ಕಾರದ ಆದೇಶದಲ್ಲಿ ತಾಂತ್ರಿಕ ಕಾರ್ಯನಿರತ ತಂಡದ ಮಾರ್ಗದರ್ಶನದಲ್ಲಿ ಲೋಕೋಪಯೋಗಿ ಇಲಾಖೆ ತಯಾರಿಸಿದ Common Schedule of Rates –Vol-1, Common Schedule of Rates –Buildings, Common Schedule of Rates – Roads and Bridges ಅನುಸೂಚಿತ ಏಕರೂಪ ದರಪಟ್ಟಿಯನ್ನು ನಿರ್ಮಾಣ ಕಾಮಗಾರಿಗಳನ್ನು ನಿರ್ವಹಿಸುವ ಸರ್ಕಾರದ ಎಲ್ಲಾ ಇಲಾಖೆಗಳು / ನಿಗಮ/ಮಂಡಳಿ /ಸಂಸ್ಥೆಗಳು ತಕ್ಷಣದಿಂದಲೇ ಜಾರಿಗೆ ಬರುವಂತೆ ಸದರಿ ದರಗಳನ್ನು ಅಂದಾಜು ತಯಾರಿಕೆ, ಟೆಂಡರ್ ಪ್ರಕ್ರಿಯೆ ಮತ್ತು ಅನುಷ್ಠಾನಗೊಳಿಸುವಲ್ಲಿ ಅಳವಡಿಸಕೊಳ್ಳತಕ್ಕದೆಂದು ತಿಳಿಸಲಾಗಿದೆ.
3. ದಿನಾಂಕ 25/03/2022 ರ ಸರ್ಕಾರದ ಆದೇಶದಲ್ಲಿ ತಾಂತ್ರಿಕ ಕಾರ್ಯನಿರತ ತಂಡದ ಮಾಗದರ್ಶನದಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ಇವರ ನೇತೃತ್ವದಲ್ಲಿ ತಯಾರಿಸಿರುವ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳ ಅನುಸೂಚಿತ ಏಕರೂಪ ದರಪಟ್ಟಿ 2021-22 ಸಂಪುಟ 5 ನ್ನು ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳನ್ನು ನಿರ್ವಹಿಸುವ ಸರ್ಕಾರದ ಎಲ್ಲಾ ಇಲಾಖೆಗಳು / ನಿಗಮ/ ಮಂಡಳಿ / ಸಂಸ್ಥೆಗಳು ತಕ್ಷಣದಿಂದಲೇ ಜಾರಿಗೆ ಬರುವಂತೆ ಸದರಿ ದರಗಳನ್ನು ಅಂದಾಜು ತಯಾರಿಕೆ, ಟೆಂಡರ್ ಪ್ರಕ್ರಿಯೆ ಮತ್ತು ಅನುಷ್ಠಾನಗೊಳಿಸುವಲ್ಲಿ ಅಳವಡಿಸಕೊಳ್ಳತಕ್ಕದೆಂದು ತಿಳಿಸಲಾಗಿದೆ.
4. ಸದರಿ ಆದೇಶಗಳಲ್ಲಿ ಈ ಕೆಳಕಂಡ ಅಂಶಗಳನ್ನು ಸಹ ತಿಳಿಸಲಾಗಿದೆ.
   - ➢ ನಿರ್ಮಾಣ ಕಾಮಗಾರಿಗಳನ್ನು ಹಾಗೂ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳನ್ನು ನಿರ್ವಹಿಸುವ ಸರ್ಕಾರದ ಎಲ್ಲಾ ಇಲಾಖೆಗಳು / ನಿಗಮ / ಮಂಡಳಿ / ಸಂಸ್ಥೆಗಳು ತಕ್ಷಣದಿಂದಲ್ಲೇ ಜಾರಿಗೆ ಬರುವಂತೆ ಸದರಿ ದರಗಳನ್ನು ಅಂದಾಜು ತಯಾರಿಕೆ, ಟೆಂಡರ್ ಪ್ರಕ್ರಿಯೆ ಮತ್ತು ಅನುಷ್ಠಾನಗೊಳಿಸುವಲ್ಲಿ ಅಳವಡಿಸಿಕೊಳ್ಳತಕ್ಕದು.

- ➢ ಸದರಿ ಅನುಸೂಚಿತ ದರಪಟ್ಟಿಯನ್ನು ಲೋಕೋಪಯೋಗಿ ಇಲಾಖಾ ಅಂತರ್ಜಾಲದಲ್ಲಿ ಹಾಗೂ ಸಂಪುಟ 5 ನ್ನು ಸಂಬಂದಪಟ್ಟ ಇಲಾಖೆಗಳ ಅಂತರ್ಜಾಲದಲ್ಲಿ ಪ್ರಕಟಿಸುವುದು.
- ➢ ಸಿಮೆಂಟ್, ಉಕ್ಕು ಮತ್ತು ಡಾಬರ್ ಬೆಲೆಗಳನ್ನು ಹಾಗೂ ಎಲ್ಲಾ ರೀತಿಯ ಕೊಳವೆಗಳ (ಪೈಪ್ಸ್) ಬೆಲೆಗಳನ್ನು ಪ್ರತಿ ತ್ರೈಮಾಸಿಕ ಅವಧಿಗೆ ಶೇಕಡಾ 10 ಕ್ಕಿಂತ ದರ ವ್ಯತ್ಯಾಸವಾದ್ದಲ್ಲಿ, ಪರಿಷ್ಕೃತ ದರಗಳನ್ನು ಪ್ರಕಟಿಸುವುದು.
- ➢ ಶೇಕಡಾ 12 ರಷ್ಟು ಜಿಎಸ್‌ಟಿ ಪ್ರತಿಶತವನ್ನು ಅಂದಾಜು ಪಟ್ಟಿಯಲ್ಲಿ ಪ್ರತ್ಯೇಕವಾಗಿ ಸೇರ್ಪಡೆ ಮಾಡುವುದು.
- ➢ ಗುತ್ತಿಗೆ ಅವಧಿಯನ್ನು ಗುತ್ತಿಗೆದಾರರ ವಿಳಂಬದಿಂದ ವಿಸ್ತರಿಸಿದ್ದಲ್ಲಿ, ವಿಸ್ತೃತ ಗುತ್ತಿಗೆ ಅವಧಿಯಲ್ಲಿ ಆಗುವ ಜಿಎಸ್‌ಟಿ ಹೆಚ್ಚಳವನ್ನು ಗುತ್ತಿಗೆದಾರರೆ ಭರಿಸತಕ್ಕದ್ದು.

5. ಸರ್ಕಾರದ ಮೇಲಿನ ಆದೇಶಗಳನ್ವಯ ಅನುಮೋದಿತ ಏಕರೂಪ ಅನುಸೂಚಿತ ದರಪಟ್ಟಿಗಳನ್ನು ಕವಿಪ್ರನಿನಿಯ ಕಾಮಗಾರಿಗಳ ಅಂದಾಜು ತಯಾರಿಕೆ, ಟೆಂಡರ್ ಪ್ರಕ್ರಿಯೆ ಮತ್ತು ಅನುಷ್ಠಾನಗೊಳಿಸುವಲ್ಲಿ ಹಾಗೂ ಕವಿಪ್ರನಿನಿ ಕಾಮಗಾರಿಗಳಿಗೆ ಅನ್ವಯವಾಗುವ ಶೇಕಡಾ 18 ರ ಜಿಎಸ್‌ಟಿ ಯನ್ನು ಅಳವಡಿಸಿಕೊಳ್ಳಲು ಸಲ್ಲಿಸಿದ ಪ್ರಸ್ತಾವನೆಗೆ ಅನುಮೋದನೆ ಪಡೆಯಲಾಗಿದೆ.

ಈ ಹಿನ್ನೆಲೆಯಲ್ಲಿ, ಕೆಳಕಂಡಂತೆ ಆದೇಶಿಸಿದೆ.

## ಆದೇಶ:

1. ಸರ್ಕಾರದ ದಿನಾಂಕ 18/03/2022 ಹಾಗೂ ದಿನಾಂಕ 25/03/2022 ರ ಆದೇಶದನ್ವಯ 2021–22 ನೇ ಸಾಲಿನ ಈ ಕೆಳಕಂಡ ಏಕರೂಪ ಅನುಸೂಚಿತ ದರಪಟ್ಟಿಗಳನ್ನು ಸದರಿ ಆದೇಶಗಳಲ್ಲಿ ತಿಳಿಸಿದ ದಿನಾಂಕದಿಂದ ಮುಂದಿನ ಸರ್ಕಾರದ ಆದೇಶದವರೆಗೆ ನಿಗಮದ ಎಲ್ಲಾ ಕಾಮಗಾರಿಗಳ ಅಂದಾಜು ತಯಾರಿಕೆ, ಟೆಂಡರ್ ಪ್ರಕ್ರಿಯೆ ಮತ್ತು ಅನುಷ್ಠಾನಗೊಳಿಸುವಲ್ಲಿ ಅಳವಡಿಸಿಕೊಳ್ಳತಕ್ಕದ್ದು.

| | | |
|---|---|---|
| 1 | Vol-1 | Common Schedule of Rates for Engineering Departments 2021-22 |
| 2 | Vol-2 | Common Schedule of Rates for Buildings 2021-22 |
| 3 | Vol-3 | Common Schedule of Rates for Roads and Bridges 2021-22 |
| 4 | Vol-5 | Common Schedule of Rates for water supply and UGD works 2021-22 |

2. ಸದರಿ ಅನುಸೂಚಿತ ದರಪಟ್ಟಿಗಳ ಮೇಲೆ ಕಾಲಕಾಲಕ್ಕೆ ಹೊರಡಿಸಲಾಗುವ ತಿದ್ದುಪಡಿಕೆ / ಸೇರಿಸುವಿಕೆ/ ಹೆಚ್ಚುವರಿಸುವಿಕೆ / ತೆಗೆದುಹಾಕುವುದು/ ಜೋಡಿಕೆ / ತಿದ್ದೋಲೆ (amendments/ inclusions/ additions / deletions/ addendum / corrigendum) ಗಳನ್ನು ಹೊರಡಿಸಲಾಗುವ ದಿನಾಂಕದಿಂದ ಅನ್ವಯವಾಗುವಂತೆ ಅಳವಡಿಸಿಕೊಳ್ಳಲು ಅನುಮೋದಿಸಲಾಗಿದೆ. ಈ ಬಗ್ಗೆ ಪ್ರತ್ಯೇಕವಾಗಿ ಆದೇಶಗಳನ್ನು ಹೊರಡಿಸಲಾಗುವುದಿಲ್ಲ.
3. ಕವಿಪ್ರನಿನಿಯ ಕಾಮಗಾರಿಗಳಿಗೆ ಶೇಕಡಾ 18 ರ ಜಿಎಸ್‌ಟಿ ಅನ್ವಯವಾಗುವ ಹಿನ್ನೆಲೆಯಲ್ಲಿ, ಮೇಲೆ ತಿಳಿಸಿದ ಏಕರೂಪ ಅನುಸೂಚಿತ ದರಪಟ್ಟಿಗಳನ್ನು ಸರ್ಕಾರದ ಆದೇಶದಲ್ಲಿ ತಿಳಿಸಿರುವ ಶೇಕಡಾ 12 ರ ಬದಲಾಗಿ ಶೇಕಡಾ 18 ರಷ್ಟು ಜಿಎಸ್‌ಟಿ ಯನ್ನು ಅಳವಡಿಸಿಕೊಳ್ಳುವುದು.

BR 12/5/22

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕವಿಪ್ರನಿನಿ, ಬೆಂಗಳೂರು.

**ಪ್ರತಿಗಳು:–**

1. ಎಲ್ಲಾ ಮುಖ್ಯ ಇಂಜಿನಿಯರುಗಳು (ವಿ), ಕವಿಪ್ರನಿನಿ.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
3. ಕಂಪನಿ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
4. ಎಲ್ಲಾ ಅಧೀಕ್ಷಕ ಇಂಜಿನಿಯರುಗಳು (ವಿ) / (ಸಿವಿಲ್), ಕವಿಪ್ರನಿನಿ.
5. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ ಮತ್ತು ಎಂಐಎಸ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು– ಸುತ್ತೋಲೆಯನ್ನು ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು ಕೋರಿದೆ.
6. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ) / (ಸಿವಿಲ್), ಕವಿಪ್ರನಿನಿ.
8. ಎಲ್ಲಾ ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
9. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಪ್ರಸರಣ)/ (ಹಣಕಾಸು)/ (ಆ ಮತ್ತು ಮಾ.ಸಂ) ರವರುಗಳ ಹಿರಿಯ ಆಪ್ತಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.